೨) ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ಪಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರುಗಳು ಇಲ್ಲದಿರುವುದು

ಶ್ರೀಮತಿ ಮನೋರಮಾ ಮಾಧ್ವರಾಜ್.—ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಸರಕಾರಿ ಉನ್ನತ ಪ್ರಾಥಮಿಕ ಶಾಲೆಗಳಲ್ಲಿ ಏಳು ತರಗತಿಗಳ ಶಾಲೆಗಳಲ್ಲಿ ಇಬ್ಬರೇ ಉಪಾಧ್ಯಾಯರುಗಳಿದ್ದು ಪಾಠ ಪ್ರವಚನಗಳು ನಡೆಯದೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಸರಕಾರವು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವುದು ಕಡ್ಡಾಯವಾಗಿರುವುದರಿಂದ ಸರಕಾರ ಇದುವರೆಗೆ ಸದರಿ ಶಾಲೆಗಳಿಗೆ ಮಾಡುತ್ತಿರುವ ವೆಚ್ಚ ಉಪಯೋಗವಿಲ್ಲದಂತಾಗುತ್ತದೆ. ಇದೇ ರೀತಿ ಇಡೀ ಜಿಲ್ಲೆಯಲ್ಲಿ ಸುಮಾರು ೭೫೦ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು ಸದರಿ ಹುದ್ದೆಗಳನ್ನು ತುಂಬದಿದ್ದಲ್ಲಿ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುವುದರಿಂದ ಕೂಡಲೇ ಸದರಿ ಹುದ್ದೆಗಳನ್ನು ತುಂಬಲು ಸೂಕ್ತ ಕ್ರಮ ಕೈಕೊಳ್ಳುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಸೊ ಮಶೇಖರ್.—ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರೀ ಪ್ರಾಥಮಿಕ ಶಾಲೆಗಳಲ್ಲಿನ ಶಿಕ್ಷಕರ ತೀವ್ರ ಕೊರತೆಯನ್ನು ನಿವಾರಿಸಲು ತಕ್ಷಣವೇ ಸಾಧ್ಯವಾದಲ್ಲಿ ನಿಯೋಜನೆ ಮೇರೆಗೆ ಭರ್ತಿ ಮಾಡಲು ಇಲಾಖೆಗೆ ಸೂಕ್ತ ನಿರ್ದೇಶನ ನೀಡಲಾಗುವುದು.

ಖಾಲೀ ಇರುವ ಎಲ್ಲ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಜಿಲ್ಲಾ ನೇಮಕಾತಿ ಸಮಿತಿಗಳ ಮೂಲಕ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

೩) ಶಿವಮೊಗ್ಗ ಜಿಲ್ಲೆಯಲ್ಲಿರುವ ವಾರಾಹಿ ಜಲ ವಿದ್ಯುತ್ ಯೋಜನೆಯಲ್ಲಿ ಭೂ ಮುಳುಗಡೆಯಾವ ರೈತರಿಗೆ ಪುನರ್ವಸತಿ ಕಾರ್ಯದಲ್ಲಿ ವಂಚನೆಯಾಗಿರುವುದು

ಶ್ರೀ ಬಿ. ಸ್ವಾಮಿರಾವ್ —ಶಿವಮೊಗ್ಗ ಜಿಲ್ಲೆಯಲ್ಲಿ ನಡೆಯುತ್ತಿರುವ ವರಾಹಿ ಜಲವಿದ್ಯುತ್ ಯೋಜನೆಯಲ್ಲಿ ಮುಳುಗಡೆಯಾಗುವ ರೈತ ಬಡ ಕುಟುಂಬದವರಿಗೆ ಪರಿಹಾರ ಪುನರ್‌ವಸತಿ ಕಾರ್ಯ ನಿರ್ವಹಿಸುವಲ್ಲಿ ರೈತರಿಗೆ ಮತ್ತು ಸರಕಾರಕ್ಕೆ ಭಾರಿ ವಂಚನೆ ಮಾಡಿರುವ ಪ್ರಕರಣಗಳು ನಡೆದರೂ ಸರಕಾರ ಕಣ್ಣುಮುಚ್ಚಿ ಕೂತಿದೆ. ರೈತರು, ಜಮೀನು ಮನೆ ಕಟ್ಟಡ ಅಲ್ಲದೆ ಅವರೇ ಬೆಳೆಸಿದ, ಫಲವೃಕ್ಷಗಳಿಗೆ ಪರಿಹಾರವನ್ನು ನೀಡುವಲ್ಲಿ ತಾರತಮ್ಯವೆಸಗಿ ಬಹಳ ಕಾಲದಿಂದ ವಾಸಿಸುತ್ತಿದ್ದ ಗಟ್ಟಿವಂಟ್ಟಾದ ಮನೆಗಳಿಗೆ ಕಡಿಮೆ ಪರಿಹಾರವನ್ನು. ಪರಿಹಾರಕ್ಕೊಸ್ಕರ ಇತ್ತೀಚೆಗೆ ಕಟ್ಟಿರುವ ಮನೆಗಳಿಗೆ ಹೆಚ್ಚು ಪರಿಹಾರವನ್ನು ನಿಗದಿ ಮಾಡಿರುತ್ತಾರೆ ಅಲ್ಲದೆ ಮುಳುಗಿರುವ ಹಾಗೂ ಮುಳುಗುತ್ತಿರುವ ಮನೆಗಳಿಗೆ ಪರಿಹಾರ ಮೊದಲು ಕೊಡದೇ ಮುಳುಗಡೆಯಾಗದ ಯೋಜನಾ ಪ್ರದೇಶದಿಂದ ದೂರದ ಊರುಗಳಲ್ಲಿರುವ ಶ್ರೀಮಂತ ವರ್ಗದವರಿಗೆ ಪರಿಹಾರ ಕೊಡುವಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆ ಪ್ರತಿ ವರ್ಷದಂತೆ ಪ್ರವಾಹ ಬಂದಾಗ ಸದರಿ ರೈತರ ರಕ್ಷಣೆಗಾಗಿ ಮಾಡಿದ ತಾತ್ಕಾಲಿಕ ಒಂದೊಂದು ಶೆಡ್ಡಿಗೆ ೩೫ ಸಾವಿರ ರೂಪಾಯಿಗಳಂತೆ ಸುಮಾರು ೫೦ ಶೆಡ್ಡುಗಳನ್ನು ನಿರ್ಮಿಸಿ ಲಕ್ಷಾಂತರ ರೂಪಾಯಿಗಳ ವಂಚನೆಯಾಗಿರುತ್ತದೆ. ಮೇಲ್ಕಂಡ ರೈತರಿಗೆ ಪುನರ್‌ವಸತಿ ಒದಗಿಸುವಲ್ಲಿಯೂ ಸಹ ಭಾರಿ ಪ್ರಮಾಣದ ಹಣ ದುರುಪಯೋಗವಾಗಿರುತ್ತದೆ. ಇದನ್ನು ತಡೆಗಟ್ಟಲು ರೈತ ಹೋರಾಟ ಸಮಿತಿಯವರು ಹಾಗೂ ನಾವುಗಳು ಹೈಪವರ್ ಕಮಿಟಿ ನೇಮಿಸುವಂತೆ ಒತ್ತಾಯಿಸಿದಾಗ ಸಮಿತಿಯನ್ನು ರಚಿಸಲಾಯಿತು. ಈ ಭಾರೀ ಅವ್ಯವಹಾರಗಳನ್ನು ಬಯಲಿಗೆಳೆದು ಮುಳುಗಡೆ ರೈತರಿಗೆ ನ್ಯಾಯ ಒದಗಿಸಲು ಹೈಪವರ್ ಕಮಿಟಿ ತೀರ್ಮಾನಿಸಿ ರೈತರಿಗೆ ನ್ಯಾಯ ದೊರಕಿಸಿಕೊಡುವ ಮೂಲಕ ಅವ್ಯವಹಾರ, ಭ್ರಷ್ಟಾಚಾರಗಳನ್ನು ಸಿ.ಓ.ಡಿ. ತನಿಖೆಗೆ ಒಳಪಡಿಸಬೇಕೆಂದು ಆಗ್ರಹಪಡಿಸಿ ಸರಕಾರದ ಗಮನವನ್ನು ಸೆಳೆದ ಬಗ್ಗೆ ೧೨-೮-೮೫ ರಂದು ಸಿ.ಓ.ಡಿ.ಗೆ ಒಪ್ಪಿಸಿದ್ದಾಗ್ಯೂ ಈವರೆಗೆ ಆ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಈ ರೀತಿ ವಿಳಂಬವಾದಲ್ಲಿ ಮುಳುಗಡೆಯಾದ ಮನೆಗಳನ್ನು ಬಿಟ್ಟು ತೀರ್ಥಹಳ್ಳಿ, ಯಡೂರು, ಮೇಗರವಳ್ಳಿ ಮತ್ತು ಹೊಸನಗರಗಳಲ್ಲಿ ಕಟ್ಟಿಸಿಕೊಂಡಿರುವ ಮನೆ ಮತ್ತು ಬಂಗಲೆಗಳವರು ಭಾರೀ ಮೊತ್ತದ ಪರಿಹಾರವನ್ನು ಪಡೆಯುವ ಸಾಧ್ಯತೆ ಇದೆ. ಈವರೆಗೆ ಎಂಟು ಬಾರಿ ಸದನದ ಮುಂದೆ ಈ ವಿಷಯವನ್ನು ತಂದಾಗ್ಯೂ ಯಾವ ಪ್ರಯೋಜನವೂ ಆಗಿಲ್ಲ. ೮-೪-೮೭ರ ಉದಯವಾಣಿ ಹಾಗೂ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಭೂಸ್ವಾಧೀನ, ಕಾಯಿದೆಯ ೬ರ ಅನ್ವಯ ಹೊಸನಗರ ತಾಲ್ಲೂಕಿನ ನಗರ ಹೋಬಳಿ ಯಡೂರು ಗ್ರಾಮದಲ್ಲಿನ ಸರ್ವೆ ನಂ. ೧೪೨ರಲ್ಲಿ ವೈ.ವಿ. ಭಾಸ್ಕರ ಜೋಯಿಸ್